**ಗುಂಡ:** ನಾನು 22 ವರ್ಷದವನಾಗಿದ್ದಾಗ, ವಿಶ್ವದ ಅತ್ಯಂತ ಶ್ರೀಮಂತನಾಗಬೇಕೆಂದು ಕನಸು ಕಂಡಿದ್ದೆ.
**ಗೆಳೆಯ:** ಮತ್ತೆ, ನೀನು ಶ್ರೀಮಂತನಾಗಲೇ ಇಲ್ಲ?
**ಗುಂಡ:** ಹೌದು. ಮನಸ್ಸು ಬದಲಿಸಿದೆ.




**ಟೀಚರ್:** ಭೂತಗನ್ನಡಿಯಿಂದ ಉಪಯೋಗವೇನು?
**ಗುಂಡ:** ನಾಲ್ಕು ಆಣೆ, ಎಂಟಾಣೆಯಷ್ಟು ಅಗಲ ಕಾಣಿಸುತ್ತದೆ.

**ವೀಕ್ಷಕ:** ಸರ್ ಎದ್ದು ಹೋಗಬೇಡಿ. ಇನ್ನು ಐದೇ ನಿಮಿಷ. ನಾಟಕದ ಕೊನೆಯಲ್ಲಿ ಒಂದು ಬಲವಾದ ಕಿಕ್ ಇದೆ.
**ಬರ್ನಾಡ್ ಷಾ:** ಅದನ್ನು ನಾಟಕ ಬರೆದವರಿಗೇ ಕೊಡಿ. ನನಗೆ ಬೇಡ.

**ಅಧಿಕಾರಿ:** ಮಾತು ಕಡಿಮೆ ಕೆಲಸ ಹೆಚ್ಚು. ಇದು ನಮ್ಮ ಆಫೀಸಿನ ಧ್ಯೇಯ ವಾಕ್ಯ. ಇದಕ್ಕೆ ಒಪ್ಪಿಗೆ ಇದ್ರೆ ಕೆಲಸಕ್ಕೆ ಬನ್ನಿ.
**ಮಹಿಳೆ:** ಹೌದಾ ಸರ್! ಹಾಗಾದ್ರೆ ಈ ಕೆಲಸಕ್ಕೆ ನನ್ನ ಯಜಮಾನರನ್ನು ಕಳುಹಿಸುತ್ತೇನೆ. ಅವರಾದ್ರೆ ಈ ಕೆಲಸಕ್ಕೆ ಸರಿ ಹೋಗ್ತಾರೆ.

**ಟೀಚರ್:** ನೋವು ಮತ್ತು ನಲಿವು ನೀಡುವಂತಹ ಒಂದು ವಸ್ತುವಿನ ಉದಾಹರಣೆ ಕೊಡು.
**ಗುಂಡ:** ಪ್ರತಿನಿತ್ಯ ನಮ್ಮ ಶಾಲೆಯಲ್ಲಿ ಬಾರಿಸುವ ಗಂಟೆ ಸರ್
**ಟೀಚರ್:** ಅದು ಹೇಗೆ?
**ಗುಂಡ:** ಬೆಳ್ ಬೆಳಿಗ್ಗೆ ಗಂಟೆ ಹೊಡೆದಾಗ ಮನಸ್ಸಿಗೆ ತುಂಬಾ ನೋವಾಗುತ್ತೆ. ಅದೇ ಸಂಜೆ ಗಂಟೆ ಹೊಡೆದಾಗ ತುಂಬಾ ಅಂದ್ರೆ ತುಂಬಾ ನಲಿವಾಗುತ್ತೆ.




**ಗೆಳೆಯ:** ಹೆಂಡತಿಯೊಡನೆ ವಾಕಿಂಗ್ ಹೋಗುವುದಕ್ಕೆ ಏನು ಹೇಳುತ್ತಾರೆ?
**ಗುಂಡ:** ಅದನ್ನು ಸತಿಯೊಡನೆ 'ಸಹ'ಗಮನ ಎನ್ನುತ್ತಾರೆ.

**ಹೆಂಡತಿ:** (ಬೆಳದಿಂಗಳ ಬೆಳಕಿನಲ್ಲಿ) ರೀ, ನೀವು ಈ ಹಿಂದೆ ನಿಮ್ಮ ತಟ್ಟೆಯಿಂದ ನನಗೆ ತಿನ್ನಿಸುತ್ತಿದ್ರಿ. ಆದರೆ ಈಗ ಯಾಕೆ ತಿನ್ನಿಸುತ್ತಿಲ್ಲ?
**ಗಂಡ:** ಇತ್ತೀಚೆಗೆ ನೀನು ಅಡುಗೆಯನ್ನು ತುಂಬಾ ರುಚಿರುಚಿಯಾಗಿ ಮಾಡುತ್ತಿದ್ದೀಯ ಅದಕ್ಕೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು


ಪ್ರಬಂಧದ ಅನುಬಂಧ
ಯುಗಾದಿಯ ಸಂಬಂಧ

# ಸುಧಾ

ಯುಗಾದಿ ವಿಶೇಷಾಂಕ-2024

## ಓದುಗರ ವೇದಿಕೆ



**ಕೊನೆಯ ದಿನಾಂಕ**
**ಫೆ.24, 2024**

### ಸುಧಾ-60: ಮರೆಯಲಿ ಹ್ಯಾಂಗ...

ಅರವತ್ತರ ಸಂಭ್ರಮದಲ್ಲಿರುವ 'ಸುಧಾ' ಲಕ್ಷಾಂತರ ಓದುಗರ ಭಾವಕೋಶಗಳಲ್ಲಿ ಬೆರೆತುಹೋಗಿರುವ ವಾರಪತ್ರಿಕೆ. ಅಂದಹಾಗೆ, 'ಸುಧಾ'ದೊಂದಿಗಿನ ನಿಮ್ಮ ಸಂಬಂಧ ಯಾವ ಬಗೆಯದು ಎನ್ನುವುದನ್ನು ಹಂಚಿಕೊಳ್ಳಲು 'ಯುಗಾದಿ ಸಂಚಿಕೆ' ವೇದಿಕೆ ಕಲ್ಪಿಸುತ್ತಿದೆ. ಭಾವನೆಗಳ ಕಡಲಲ್ಲಿ ತೇಲಿಬರುತ್ತಿರುವ ನೆನಪುಗಳ ಹಾಯಿದೋಣಿಯನ್ನು ದಡ ಸೇರಿಸಲು ಇದು ಸಕಾಲ. ನಿಮ್ಮ ವ್ಯಕ್ತಿತ್ವ ಹಾಗೂ ಜೀವನದ ಮೇಲೆ 'ಸುಧಾ' ಬೀರಿದ ಪರಿಣಾಮ ಯಾವ ಬಗೆಯದು ಹಾಗೂ ನಿಮ್ಮ ಕುಟುಂಬದಲ್ಲಿ 'ಸುಧಾ' ಸ್ಥಾನ ಯಾವ ರೀತಿಯದು ಎನ್ನುವುದರ ಬಗ್ಗೆ ನಮಗೆ ಪುಟ್ಟದಾಗಿ ಬರೆದು ಕಳುಹಿಸಿ.

### ಓದಿದ ಶಾಲೆ: ನೆನಪಿನ ಓಲೆ

ನಿಮ್ಮ ಬಾಲ್ಯದ ಶಾಲೆ ಎಲ್ಲಿದೆ? ಹೇಗಿದೆ? ಆ ಶಾಲೆ ನಿಮ್ಮಲ್ಲಿ ಉಳಿಸಿರುವ ಸಿಹಿ–ಕಹಿ ನೆನಪುಗಳು ಯಾವ ಬಗೆಯವು? ಶಾಲೆಯೊಂದಿಗೆ ತಳುಕು ಹಾಕಿಕೊಂಡ ಮರೆಯಲಾಗದ ನೆನಪು ಯಾವುದು? ಶಾಲೆಗೆ ಸಂಬಂಧಿಸಿದಂತೆ ಈಗಲೂ ನಿಮ್ಮನ್ನು ಪುಳಕಗೊಳಿಸುವ ನೆನಪೊಂದನ್ನು 'ಸುಧಾ' ಓದುಗರೊಂದಿಗೆ ಹಂಚಿಕೊಳ್ಳಿ.

ಮೇಲಿನ ವಿಷಯಗಳಲ್ಲಿ ಯಾವ ವಿಷಯದ ಬಗ್ಗೆಯಾದರೂ ಬರೆಯಬಹುದು. 'ಓದುಗರ ವೇದಿಕೆ' ಬರಹಗಳು (ನುಡಿ–ಯೂನಿಕೋಡ್) 250 ಶಬ್ದಗಳ ಮಿತಿಯಲ್ಲಿರಲಿ. ಬರಹದೊಂದಿಗೆ ನಿಮ್ಮ ಭಾವಚಿತ್ರವೂ ಇರಲಿ.

**ವಿಳಾಸ:**
**ಸಂಪಾದಕರು, ಸುಧಾ ಯುಗಾದಿ ವಿಶೇಷಾಂಕ**
**ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 560001**
**ಇಮೇಲ್: ugadi@sudha.co.in**